**ದಿನಾಂಕಃ 25.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಆರ್ ಎಸ್ ಎಂ., ವಾದಿ ಪರ ವಕೀಲರಿಂದ**

ದಾವೆಯನ್ನು ವಾದಿಯು ಸಲ್ಲಿಸಿರುತ್ತಾರೆ. ವಾದಿಯು ನನ್ನ ಹಾಗೂ ನನಗೆ ಜಮೀನಿನನ್ನು ಮಾರಾಟ ಮಾಡಿದವರ ವಿರುದ್ದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ನಾನು ಬಿ ಟೆಕ್ ಮತ್ತು ಎಲ್ ಎಲ್ ಬಿ ವ್ಯಾಸಂಗ ಮಾಡಿರುತ್ತೇನೆ. ನನ್ನ ಖಾಯಂ ವಿಳಾಸ ಕೊಳ್ಳೆಗಾಲ. ನಾನು ಜಮೀನನ್ನು ಹುಡುಕಿಕೊಂಡು ಬಂದಾಗ ಚಂಧ್ರಾನಾಯ್ಕ ರವರು ಪರಿಚಯವಾಗಿದ್ದು, ಸದರಿಯವರು ಜಮೀನನ್ನು ಕೊಡಿಸಿರುತ್ತಾರೆ. ಚಂಧ್ರಾನಾಯ್ಕ ರವರ ವಿಳಾಸ ಚಂಧ್ರಾನಾಯ್ಕ ಬಿನ್ ತೊಳಚಾನಾಯ್ಕ , ಕೆರೆಯಾಗಳಹಟ್ಟಿ ಆಗಿರುತ್ತದೆ. ನನಗೆ ಜಮೀನನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. 1 ನೇ ಪ್ರತಿವಾದಿಯರ ಗಂಡನ ಹೆಸರು ಪುಲ್ಲಪ್ಪನಾಯ್ಕ. ಪುಲ್ಲಪ್ಪನಾಯ್ಕ ರವರನ್ನು ನಾನು ಭಾವಚಿತ್ರದಲ್ಲಿ ಕಲ್ಯಾಣದುರ್ಗದಲ್ಲಿ ನೋಡಿರುತ್ತೇನೆ. 1 ನೇ ಪ್ರತಿವಾದಿಗೆ 2, 3 ಹಾಗೂ 8 ನೇ ಪ್ರತಿವಾದಿ ಹಾಗೂ ಸುವರ್ಣಜ್ಯೋತಿ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿಯು ವಂಶವೃಕ್ಷದ ಪ್ರಕಾರ 2, 3 ಮತ್ತು 8 ನೇ ಪ್ರತಿವಾದಿಯರು ಮಕ್ಕಳಿದ್ದು ಸುವರ್ಣಜ್ಯೋತಿ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯನ್ನು ಸದರಿಯವರ ಮಕ್ಕಳ ವಿಚಾರಿಸಿದ್ದು, ಅವರು ಒಂದು ಹೆಣ್ಣು ಇಬ್ಬರು ಗಂಡು ಮಕ್ಕಳು ಎಂದು ತಿಳಿಸಿರುತ್ತಾರೆ. ನಾನು 2 ನೇ ಪ್ರತಿವಾದಿಯನ್ನು ಕಲ್ಯಾಣ ದುರ್ಗದ ಸದರಿಯವರ ಮನೆಯಲ್ಲಿ ವಿಚಾರಿಸಿರುತ್ತೇನೆ. ಸದರಿ ಸಮಯದಲ್ಲಿ ಚಂಧ್ರಾನಾಯ್ಕ ಎಂಬ ಇಬ್ಬರು ವ್ಯಕ್ತಿಗಳು ಹಾಜರಿದ್ದರು. ನನ್ನ ಕರೆದುಕೊಂಡು ಹೋದ ವ್ಯಕ್ತಿಗಳ ಬಳಿ 1 ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ವಿಚಾರಿಸಿರುವುದಿಲ್ಲ. 1 ನೇ ಪ್ರತಿವಾದಿಯು ತನ್ನ ಮಕ್ಕಳ ಬಗ್ಗೆ ತಿಳಿಸಿದ ಸಂಗತಿ ಸತ್ಯವಾಗಿರುತ್ತದೋ ಇಲ್ಲವೋ ಎಂಬ ಬಗ್ಗೆ ನನ್ನನ್ನು ಕರೆದುಕೊಂಡು ಹೋದ ಚಂಧ್ರಾನಾಯ್ಕ ರವರ ಬಳಿ ವಿಚಾರಿಸಿರುವುದಿಲ್ಲ. 1 ನೇ ಪ್ರತಿವಾದಿ ಚಂಧ್ರಾನಾಯ್ಕ ರವರ ಚಿಕ್ಕಮ್ಮ ರಾಗಿರುತ್ತಾರೆ.

ನಾನು ಕ್ರಯಕ್ಕೆ ಪಡೆಯುವಾಗ 1, 3 ಮತ್ತು 8 ನೇ ಪ್ರತಿವಾದಿಯರು ಹಾಗು ಅವರ ಹೆಂಡತಿ ಮಕ್ಕಳಿಂದ ಕ್ರಯ ಪತ್ರಕ್ಕೆ ಸಹಿ ಪಡೆದಿರುತ್ತೇನೆ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಕೊಡಬೇಕಾದ ಭಾಗವನ್ನು ಈಗಾಗಲೇ ಕೊಟ್ಟಿದ್ದರಿಂದ ಜಮೀನು 1, 3 ಮತ್ತು 8 ನೇ

ಪ್ರತಿವಾದಿಯರಿಗೆ ಸೇರಿರುತ್ತದೆ ಎಂದು ಹೇಳಿದ್ದರಿಂದ 2 ನೇ ಪ್ರತಿವಾದಿಯ ಸಹಿಯನ್ನು ಕ್ರಯ ಪತ್ರಕ್ಕೆ ಪಡೆದಿರುವುದಿಲ್ಲ. ಸದರಿ ವಿಚಾರವನ್ನು 2 ನೇ ಪ್ರತಿವಾದಿಯ ಬಳಿ ವಿಚಾರಿಸಿರುವುದಿಲ್ಲ. ಕ್ರಯದ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು 2 ನೇ ಪ್ರತಿವಾದಿಯನ್ನು ಕರೆಸಿರವುದಿಲ್ಲ. 2 ನೇ ಪ್ರತಿವಾದಿಗೆ ಜಮೀನನ್ನು ನೀಡಿದ್ದು , ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ದಾಖಲೆಯನ್ನು ಪಡೆದುಕೊಂಡಿಲ್ಲ.

1 ನೇ ಪ್ರತಿವಾದಿಯ ಗಂಡ 2010 ರಲ್ಲಿ ಮೃತರಾದ ನಂತರ 1 ನೇ ಪ್ರತಿವಾದಿಗೆ ದಾವಾ ಸ್ವತ್ತು ಪೌತಿ ಖಾತೆ ಮೂಲಕ ವರ್ಗಾವಣೆಯಾಗಿರುತ್ತದೆ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿ ಅನುಭವಿಸುತ್ತಿದ್ದರು. 1 ನೇ ಪ್ರತಿವಾದಿ ಸುವರ್ಣಜ್ಯೋತಿ ಎಂಬ ಮಗಳಿದ್ದು, ಆ ಬಗ್ಗೆ ನಾನು ಸರಿಯಾಗಿ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸುವರ್ಣಜ್ಯೋತಿಗೆ ಭೀಮನಾಯ್ಕ ಎಂಬ ಗಂಡ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ವಾದಿಯು ಮಗಳಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ವಾದಿಯನ್ನು ಈ ದಾವೆಯನ್ನು ಸಲ್ಲಿಸಿದ ನಂತರ ಅವರನ್ನು ದಾವೆಗೆ ಸಂಬಂಧಿಸಿದಂತೆ ವಿಚಾರಿಸಿರುವುದಿಲ್ಲ. ಹಾಗೆ ವಿಚಾರಿಸಬೇಕು ಎಂದು ನನಗೆ ಅನಿಸಲಿಲ್ಲ.

ಪ್ರತಿವಾದಿಯರ ಕುಟುಂಬಕ್ಕೆ ಏನೇನು ಅಸ್ತಿಗಳು ಇರುತ್ತವೆ ಎಂದು ನಾನು ವಿಚಾರಿಸಿರುವುದಿಲ್ಲ. ನನಗೆ ತೋರಿಸಿದ ವಂಶವೃಕ್ಷವನ್ನು ಕಲಾರ್ಣದುರ್ಗ ತಹಸೀಲ್ದಾರ್ ರವರಿಂದ ಪಡೆದಿದ್ದರು. ನಾನು 1 ನೇ ಪ್ರತಿವಾದಿಯ ವಂಶವೃಕ್ಷವನ್ನು 1 ನೇ ಪ್ರತಿವಾದಿಯಿಂದ ಪಡೆದಿರುತ್ತೇನೆ. ನಾನು ಖುದ್ದಾಗಿ ತಹಸೀಲ್ದಾರ್ ಕಚೇರಿಯಿಂದ ವಂಶವೃಕ್ಷ ಪಡೆದಿರುವುದಿಲ್ಲ. ದಾವಾ ಸ್ವತ್ತು 1 ರಿಂದ 3 ಮತ್ತು 8 ನೇ ಪ್ರತಿವಾದಿಯರು ಹಾಗೂ ಸುವರ್ಣಜ್ಯೋತಿ ರವರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸುವರ್ಣಜ್ಯೋತಿ 1 ನೇ ಪ್ರತಿವಾದಿಯ ಎರಡನೇ ಹೆಣ್ಣು ಮಗಳು ಎಂದರೆ ನನಗೆ ಗೊತ್ತಿಲ್ಲ. ಸುವರ್ಣಜ್ಯೋತಿ ಮೃತರಾಗಿರುವುದರಿಂದ ವಾದಿಗೆ ಸದರಿಯವರ ಮಗಳಾಗಿ ದಾವಾ ಸ್ವತ್ತಿನಲ್ಲಿ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ನಡುವೆ ಪಾಲು ವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ.

ಓ ಎಸ್ ನಂಃ143/2021

ಡಿಡಬ್ಲ್ಯೂ: 01

ಪ್ರತಿವಾದಿಯರು ಸಾಲವನ್ನು ತೀರಿಸುವ ಸಲುವಾಗಿ ಜಮೀನನ್ನು ಮಾರಾಟ ಮಾಡಿರುತ್ತಾರೆ. ಯಾರ ಬಳಿ ಎಷ್ಟು ಸಾಲ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಲಕ್ಕೆ ಸಂಬಂಧಪಟ್ಟ ದಾಖಲೆಯನ್ನು ನಾನು ನೋಡಿರುವುದಿಲ್ಲ. ಯಾವ ಉದ್ದೇಶಕ್ಕಾಗಿ ಸಾಲ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಾರೆ. 8 ನೇ ಪ್ರತಿವಾದಿ ಬಟ್ಟೆ ವ್ಯಾಪಾರ ಮಾಡುತ್ತಾರೆ. 3 ಮತ್ತು 8 ನೇ ಪ್ರತಿವಾದಿಯರು ಕಲ್ಯಾಣದುರ್ಗದಲ್ಲಿ ವಾಸವಾಗಿರುತ್ತಾರೆ. ದಾವಾ ಸ್ವತ್ತಿನಲ್ಲಿ ಯಾರಿಗೆ ಹಕ್ಕು ಇರುತ್ತದೆ ಎಂದು ವಿಚಾರಿಸಿದ್ದು, ಮೂರು ಜನ ಮಕ್ಕಳಿಗೆ ಹಕ್ಕು ಇರುತ್ತದೆ. ಪುಲ್ಲಪ್ಪನಾಯ್ಕು ರವರ ಮೂಲ ವಾಸ ಆಂಧ್ರಪ್ರದೇಶ ರಾಜ್ಯದ ಬೆಳಗುಪ್ಪ . 1 ನೇ ಪ್ರತಿವಾದಿಯ ತವರು ಮನೆ ಕೆರೆಯಾಗಳಹಳ್ಳಿ ಎಂದರೆ ನನಗೆ ಗೊತ್ತಿಲ್ಲ.

ಪುಲ್ಲಪ್ಪನಾಯ್ಕುನ ಮರಣಾ ನಂತರ ಆತನ ನಾಲ್ಕು ಜನ ಮಕ್ಕಳು ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಮೂರು ಜನ ಮಕ್ಕಳು ಎಂದು ನುಡಿಯುತ್ತಾರೆ. 2, 3 ಮತ್ತು 8 ನೇ ಪ್ರತಿವಾದಿಯರಿಗೆ ಯಾವಾಗ ಮದುವೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

**( ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.